

6ನೇ ಪುಟದಿಂದ



ಬೆಳೆಯುತ್ತದೆ. ಮರದಲ್ಲಿ ನಾಲ್ಕಿಂಚು ಉದ್ದದ ಅಗಲವಾದ ಎಲೆಗಳಿರುತ್ತವೆ. ಹಣ್ಣು 3–5 ಇಂಚು ಉದ್ದವಾಗಿ 2–3 ಇಂಚು ಸುತ್ತಳತೆ ಹೊಂದಿದೆ.

ಇದರಲ್ಲಿಯೂ ಹಲವು ಜಾತಿಗಳಿವೆ. 250 ಗ್ರಾಂನಿಂದ ಆರಂಭಿಸಿ 750 ಗ್ರಾಂ ತನಕ ತೂಕವೂ ಇರುತ್ತವೆ. ಮರದಲ್ಲಿ ಗುಲಾಬಿ ವರ್ಣದ ಹೂ ಅರಳಿದರೆ ತುಂಬ ಸುಂದರವಾಗಿ ಕಾಣಿಸುತ್ತದೆ. ಹಣ್ಣಿನೊಳಗೆ ಚಿಕ್ಕ ಗಾತ್ರದ ಬೀಜಗಳಿದ್ದು, ಬೀಜಗಳಿಂದ ಸಸಿ ಮಾಡುವುದಕ್ಕಿಂತಲೂ ಕಸಿ ಕಟ್ಟಿದರೆ ಫಲ ಸಿಗುವುದು ಶೀಘ್ರ.

ಸೇಬಿನಂತೆ ಕ್ವೀನ್ಸ್ ಹಣ್ಣನ್ನು ಹಾಗೆಯೇ ತಿನ್ನಬಹುದು. ಲಿಂಬೆರಸ, ಸಕ್ಕರೆ, ಜೇನುತುಪ್ಪ ಬೆರೆಸಿ ತಯಾರಿಸುವ ಜ್ಯೂಸ್ ತುಂಬ ರುಚಿಯಿರುತ್ತದೆ. ಸಾಸ್, ಪೇಸ್, ಜೆಲ್ಲಿ, ಕೇಕ್ ಇತ್ಯಾದಿಗಳನ್ನೂ ಇದರಿಂದ ತಯಾರಿಸುತ್ತಾರೆ.

ರೋಗನಿರೋಧಕ ಶಕ್ತಿಯನ್ನು ಹೆಚ್ಚಿಸುವ ಈ ಹಣ್ಣಿನಲ್ಲಿ 57 ಕ್ಯಾಲರಿ ಶಕ್ತಿ ಇದೆ. ಶೇಕಡಾ 25 ರಷ್ಟು ಸಿ ಜೀವಸತ್ವವಿದೆ. ಶೇ.14ರಷ್ಟು ತಾಮ್ರ, ಕಬ್ಬಣಾಂಶ, ಪೊಟಾಷಿಯಂ, ಮ್ಯಾಗ್ನೇಸಿಯಂ, ಥಯಾಮಿನ್, ರೈಬೋಫ್ಲೇವಿನ್ ಅಲ್ಲದೆ ಬಿ ಸಂಯುಕ್ತ ಜೀವಸತ್ವಗಳನ್ನೂ ಹೊಂದಿದೆ. ಇದರಲ್ಲಿ ಕ್ಯಾನ್ಸರ್ ನಿರೋಧಕ ಅಂಶಗಳೂ ಇವೆ ಎನ್ನಲಾಗಿದೆ. ಅಪರೂಪಕ್ಕೆ ಈ ಹಣ್ಣು ಕರ್ನಾಟಕದ ಮಾರುಕಟ್ಟೆಗೂ ಬರುವುದುಂಟು. ■